**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 76/2020**

**ಚಾ.ಸಾಃ 26, ಫ್ರಾ.ಸಾಃ 09**

| | |
|---|---|
| ಸಾಕ್ಷಿದಾರನ ಹೆಸರು | ವಸಂತ ಆಚಾರ್ |
| ತಂದೆಯ ಹೆಸರು | ರಾಮಾ ಆಚಾರ್ |
| ವಯಸ್ಸು | 58 ವರ್ಷಗಳು |
| ಉದ್ಯೋಗ | ಪೋಲೀಸ್ ನಿರೀಕ್ಷಕರು, ಗೋಕರ್ಣ ಪೋಲೀಸ್ ಠಾಣೆ |
| ವಾಸ್ತವ್ಯ | ಗೋಕರ್ಣ |

**ಸಾಕ್ಷಿಯನ್ನು ದಿನಾಂಕಃ 27-07-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ದಿನಾಂಕ 25-09-2019 ರಿಂದ ದಿನಾಂಕ 03-10-2020 ರ ವರೆಗೆ ಹೊನ್ನಾವರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ಈ ಪ್ರಕರಣದ ಕಡತವನ್ನು ದಿನಾಂಕಃ **09-03-2020** ರಂದು ಚಾಸಾ-25 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ.

ಅದೇ ದಿನ ಸಂಜೆ 05-00 ರಿಂದ 06-00 ಗಂಟೆಯ ಸಮಯದಲ್ಲಿ ಘಟನಾ ಸ್ಥಳಕ್ಕೆ ಬೇಟಿ ನೀಡಿ ಪಂಚರ ಸಮಕ್ಷಮ ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಕಚ್ಚಾ ನಕಾಶೆ ತಯಾರಿಸಿ 2 ಫೊಟೋ ತೆಗೆದಿರುತ್ತೇನೆ. ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ನಿಪಿ-3 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಫೊಟೋಗಳನ್ನು ನೊಡುತ್ತಿದ್ದು ನಿಪಿ-4 ರಿಂದ 7 ಎಂದು ಗುರುತಿಸಲಾಗಿದೆ.

ದಿನಾಂಕ 31-07-2021 ರಂದು ಸಿಬ್ಬಂದಿಯೊಂದಿಗೆ ಕಡತೋಕಾ ಜಡ್ಡಿಗದ್ದೆ ಗಸ್ತು ಕರ್ತವ್ಯ ಮಾಡುತ್ತಿದ್ದಾಗ ಚಂದಾವರ ಕಡೆಯಿಂದ ಮೋಟಾರು ಸೈಕಲ್ಲಿನಲ್ಲಿ 2 ಜನ ಬರುತ್ತಿದ್ದು ಅವರನ್ನು ಹಿಡಿದು ವಿಚಾರಿಸಲಾಗಿ ಅವರು ಯಾವುದೇ ಸಮರ್ಪಕವಾದ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ ಅವರನ್ನು ಠಾಣೆಗೆ ಕರೆತಂದು ಹೆಸರು, ವಿಳಾಸ ವಿಚಾರಿಸಲಾಗಿ ಅವರು ಸಜ್ಜದ್ ಅಹ್ಮದ್ ತಂದೆ ಕುತುಬುದ್ದಿನ್ ಗಣಿ ಮತ್ತು ಮುಬಾಶಿರ್ ಕುತುಬುದ್ದಿನ್ ಗಣಿ, ಚಂದಾವರ ಎಂದು ತಿಳಿಸಿರುತ್ತಾರೆ. ಸಂಶಯದಿಂದ ಅವರನ್ನು ಕೂಲಂಕುಷವಾಗಿ ವಿಚಾರಿಸಲಾಗಿ ಅವರು ಈ ಪ್ರಕರಣದಲ್ಲಿ ಕಳುವು ಮಾಡಿರುವುದನ್ನು ಒಪ್ಪಿಕೊಂಡು ಸ್ವ ಖುಷಿ ಹೇಳಿಕೆಯನ್ನು ನೀಡಿರುತ್ತಾರೆ. ಅವರು ತಮ್ಮ ಹೇಳಿಕೆಯಲ್ಲಿ ಈ ಪ್ರಕರಣ ಅಲ್ಲದೇ ಇತರೇ 8 ಪ್ರಕರಣಗಳಲ್ಲಿ ತಾವು ಕಳುವು ಮಾಡಿರುವುದಾಗಿ ತಿಳಿಸಿರುತ್ತಾರೆ. ಆರೋಪಿತರು ತಾವು ಕಳುವು ಮಾಡಿರುವ ಸ್ಥಳವನ್ನು ಮತ್ತು ಮಾಲಿನ ಬಗ್ಗೆ ಮಾಹಿತಿ ನೀಡುವುದಾಗಿ ಹೇಳಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ 2020 ರ ಮಾರ್ಚ ತಿಂಗಳ ಮೊದಲ ವಾರದಲ್ಲಿ ತನ್ನ ತಂಗಿಯ ಮನೆಯಾದ

ಹಳದೀಪುರಕ್ಕೆ ಹೋಗಿ ಚಂದಾವರ ಕಡತೋಕಕ್ಕೆ ಬರುವಾಗ ಬಾದಳ್ಳಿಯ ಒಂದು ಆರ್.ಸಿ.ಸಿ. ಮನೆಯಲ್ಲಿ ಬೀಗ ಹಾಕಿದ್ದನ್ನು ಕಂಡು ಅದೇ ದಿನ ರಾತ್ರಿ ಅವರಿಬ್ಬರೂ ಮನೆಗೆ ಹಾಕಿದ ಬೀಗದ ಚಿಲಕ ತೆಗೆದು ಬೆಡ್ ರೂಮಿನಲ್ಲಿ ಇಟ್ಟಿದ್ದ ಗೋದ್ರೇಜ್ ಕಪಾಟಿನ ಕೆಳಗೆ ಇಟ್ಟಿದ್ದ ಒಂದು ಲಾಕರನಲ್ಲಿದ್ದ ಒಡವೆಗಳನ್ನು ಕಳ್ಳತನ ಮಾಡಿರುವುದಾಗಿ ಹೇಳಿರುತ್ತಾರೆ. ಅಲ್ಲದೇ ಕಳುವು ಮಾಡಿದ ಬಂಗಾರದ ಆಭರಣಗಳನ್ನು ಹಂತ ಹಂತವಾಗಿ ಮಣಪುರಂ ಫೈನಾನ್ಸಗೆ ಮತ್ತು ಸಂದೀಪ ಶೇಟ್, ಅನಿಲ್ ಶೇಟ್ ಮತ್ತು ನಾಗರಾಜ ಶೇಟ್‌ರವರ ಬಳಿ ತನ್ನದೇ ಬಂಗಾರ ಅಂತ ಹೇಳಿ ಗಿರವಿ ಇಟ್ಟಿರುವುದಾಗಿ ಹಣವನ್ನು ಖರ್ಚು ಮಾಡಿರುವುದಾಗಿ ಹೇಳಿರುತ್ತಾರೆ. ನಂತರ ಆರೋಪಿತರನ್ನು ದಸ್ತಗಿರಿ ಮಾಡಿ ನಿಯಮ ಪಾಲಿಸಿರುತ್ತೇನೆ.

ಆರೋಪಿತರ ಸ್ವ ಖುಷಿ ಹೇಳಿಕೆಯಂತೆ ಚಾಸಾ-4 ಮತ್ತು 5 ರವರನ್ನು ಠಾಣೆಗೆ ಕರೆಸಿಕೊಂಡು ಪಂಚರಾಗಿ ಬರಬೇಕೆಂದು ಕೇಳಿಕೊಂಡಿದ್ದು ಅದರಂತೆ ಆರೋಪಿತರು ಕಳುವು ಮಾಡಲು ಬಳಸಿದ ಕಾರನ್ನು ಮತ್ತು ಕಬ್ಬಿಣದ ರಾಡನ್ನು ಮನೆಯಲ್ಲಿ ಇಟ್ಟಿರುವುದಾಗಿ ಮತ್ತು ಬಂದರೆ ತೋರಿಸುವುದಾಗಿ ಹೇಳಿದ್ದು ಅದರಂತೆ ಈ ವಿಚಾರವನ್ನು ಪಂಚರಿಗೆ ತಿಳಿಸಿದ್ದು ಅವರು ಒಪ್ಪಿಕೊಂಡಿದ್ದು, ನಂತರ ಆರೋಪಿತರನ್ನು, ಪಂಚರನ್ನು ಚಂದಾವರ ಗ್ರಾಮದ ಆರೋಪಿತರ ಮನೆಗೆ ಕರೆದುಕೊಂಡ ಹೋಗಲಾಗಿ ಅಲ್ಲಿ ಆರೋಪಿತರು ಕೃತ್ಯಕ್ಕೆ ಬಳಸಿದ ಕಾರನ್ನು ಮನೆಯ ಮುಂದೆ ನಿಲ್ಲಿಸಿದ್ದು ಅದನ್ನು ತೋರಿಸಿದ್ದು ಇದನ್ನೇ ಕಳುವು ಮಾಡಲು ಬಳಸಿರುವುದಾಗಿ ಹೇಳಿರುತ್ತಾರೆ. ಸದರಿ ಕಾರನ್ನು ಪರಿಶೀಲಿಸಿದಾಗ ಕಾರ ನಂ. ಕೆಎ-05/ಎಎಫ್-4916 ಆಗಿರುತ್ತದೆ. 1 ನೇ ಆರೋಪಿ ಸದರಿ ಕಾರಿನ ಮುಂಭಾಗದ ಎಡಬದಿಯ ಡೋರ್ ತೆಗೆದು ಡ್ಯಾಶಬೋರ್ಡನಲ್ಲಿದ್ದ ಒಂದು ಕಬ್ಬಿಣದ ರಾಡನ್ನು ಹಾಜರುಪಡಿಸಿದ್ದು ಇದನ್ನೂ ಸಹ ಮನೆಯ ಬಾಗಿಲು ಒಡೆಯಲು ಉಪಯೋಗಿಸಿರುವುದಾಗಿ ತಿಳಿಸಿರುತ್ತಾರೆ. ನಂತರ ಆತ ನಮ್ಮನ್ನು ಮನೆಯ ಒಳಕ್ಕೆ ಕರೆದುಕೊಂಡು ಹೋಗಿ ಅಲ್ಲಿದ್ದ ಒಂದು ಕಪಾಟಿನಲ್ಲಿ ಬಂಗಾರದ ಮೂಗುತಿಯನ್ನು ತೆಗೆದು ಹಾಜರುಪಡಿಸಿದ್ದು ಕಾರು, ಕಬ್ಬಿಣದ ರಾಡು ಮತ್ತು ಮೂಗುತಿಯನ್ನು ಪಂಚರ ಸಮಕ್ಷಮ ಪಂಚನಾಮೆಯಡಿಯಲ್ಲಿ ಜಪ್ತುಪಡಿಸಿಕೊಂಡು ಫೋಟೋ ತೆಗೆಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ನಿಪಿ-14 ಎಂದು, ಸಾಕ್ಷಿ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಕಾರನ್ನು ಮತ್ತು ಮೂಗುತಿಯನ್ನು ಅಮಾನತ್ತುಪಡಿಸಿಕೊಳ್ಳುವ ಕಾಲಕ್ಕೆ ತೆಗೆದಿದ್ದ 4 ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಪಿ-15 ರಿಂದ 18 ಎಂದು ಗುರುತಿಸಲಾಯಿತು. ನಂತರ ಠಾಣೆಗೆ ಅಮಾನತ್ತುಪಡಿಸಿಕೊಂಡಿದ್ದ ವಸ್ತುಗಳನ್ನು ಠಾಣಾ ಪಿಎಫ್‌ನಲ್ಲಿ ನಮೂದಿಸಿರುತ್ತೇನೆ. ನಂತರ ಆರೋಪಿತರನ್ನು ಸೂಕ್ತ ಭದ್ರತೆಯಲ್ಲಿ ಇರಿಸಿರುತ್ತೇನೆ.

ದಿನಾಂಕ 01-08-2020 ರಂದು ಆರೋಪಿತರನ್ನು ನಾವು ಹಿಡಿದ ಸಮಯಕ್ಕೆ ಬರುತ್ತಿದ್ದ ಬೈಕನ್ನೂ ಸಹ ಕೃತ್ಯಕ್ಕೆ ಬಳಸಿರುವುದಾಗಿ ತಮ್ಮ ಹೇಳಿಕೆಯಲ್ಲಿ ಹೇಳಿದ್ದು ಮತ್ತು ಅದನ್ನು ಆರೋಪಿತರನ್ನು ಹಿಡಿದಾಗ ಅದನ್ನು ಠಾಣೆಯ ಮುಂಭಾಗದಲ್ಲಿ ನಿಲ್ಲಿಸಿದ್ದು ಠಾಣೆಗೆ 2 ಜನ ಪಂಚರನ್ನು ಬರಮಾಡಿಕೊಂಡು ಠಾಣೆಯ ಮುಂದೆ ನಿಲ್ಲಿಸಿದ್ದ ಬಜಾಜ್ ಪಲ್ಸರ್ ಕಂಪನಿಯ ಕೆಂಪು ಮತ್ತು ಬಿಳಿ ಬಣ್ಣದ ಕೆಎ-47/ಕೆ-2856 ಬೈಕನ್ನು ಪರಿಶೀಲಿಸಿ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡು

ಫೋಟೋ ತೆಗೆಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ನಿಪಿ-19 ಎಂದು, ಸಾಕ್ಷಿ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋವನ್ನು ನಿಪಿ-20 ಎಂದು ಗುರುತಿಸಲಾಯಿತು. ಸದರಿ ಬೈಕನ್ನು ಠಾಣಾ ಪಿಎಫ್‌ನಲ್ಲಿ ನಮೂದಿಸಿರುತ್ತೇನೆ.

ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಕಳುವು ಒಡವೆಗಳನ್ನು ಕುಮಟಾ ಮಣಪುರಂ ಬ್ಯಾಂಕಿನಲ್ಲಿ ಗಿರವಿ ಇಟ್ಟಿದ್ದು ತೋರಿಸುವುದಾಗಿ ಹೇಳಿದ್ದು ಅದರಂತೆ ಪಂಚರೊಡನೆ ನೆಲ್ಲಿಕೇರಿ ಶಾಖೆಯ ಕುಮಟಾ ಮಣಪುರಂ ಬ್ಯಾಂಕಗೆ ಭೇಟಿ ನೀಡಿ ಆರೋಪಿತರನ್ನು ಅಲ್ಲಿರುವ ಸಿಬ್ಬಂದಿಗೆ ತೋರಿಸಲಾಗಿ ಅವರು ದಾಖಲೆಯನ್ನು ಪರಿಶೀಲಿಸಿ ಆರೋಪಿತರು ತಮ್ಮ ಬಳಿ 4 ಉಂಗುರ, 2 ಕಿವಿಯೋಲೆ ಕುಡುಕು, 2 ಚೈನುಗಳು, ಒಂದು ಜೊತೆ ಬಳೆ ಮತ್ತು ಒಂದು ಉಂಗುರ ಮತ್ತು ಒಂದು ಚೈನನ್ನು ಇಟ್ಟಿರುವುದಾಗಿ ಹೇಳಿ ಅವುಗಳನ್ನು ಹಾಜರುಪಡಿಸಿರುತ್ತಾರೆ. ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆಯಡಿಯಲ್ಲಿ 11-15 ರಿಂದ 12-00 ಗಂಟೆ ಸಮಯದಲ್ಲಿ ಅಮಾನತ್ತುಪಡಿಸಿಕೊಂಡು ಫೋಟೋ ತೆಗೆದಿರುತ್ತೇನೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ನಿಪಿ-21 ಎಂದು, ಸಾಕ್ಷಿ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋವನ್ನು ನಿಪಿ-22 ಎಂದು ಗುರುತಿಸಲಾಯಿತು.

ಆರೋಪಿತರು ಅದಲ್ಲದೇ ಕಳುವು ಒಡವೆಗಳನ್ನು ಕುಮಟಾ ತಾಲೂಕಿನ ಮತ್ತೊಂದು ಮಣಪುರಂ ಶಾಖೆಯಲ್ಲಿಯೂ ಸಹ ಗಿರವಿ ಇಟ್ಟಿರುವುದಾಗಿ ಹೇಳಿ ನಮ್ಮನ್ನು ಬಸ್ಸಿಪೇಟೆಯಲ್ಲಿರುವ ಮತ್ತೊಂದು ಮಣಪುರಂ ಶಾಖೆಗೆ ಕರೆದುಕೊಂಡು ಹೋಗಿದ್ದು ಆರೋಪಿತರನ್ನು ಅಲ್ಲಿರುವ ಮ್ಯಾನೇಜರಿಗೆ ತೋರಿಸಲಾಗಿ ಅವರು ದಾಖಲೆಯನ್ನು ಪರಿಶೀಲಿಸಿ ಆರೋಪಿತರು ತಮ್ಮ ಬಳಿ 2 ಉಂಗುರಗಳನ್ನು ಇಟ್ಟಿರುವುದಾಗಿ ಹೇಳಿ ಅವುಗಳನ್ನು ಹಾಜರುಪಡಿಸಿರುತ್ತಾರೆ. ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆಯಡಿಯಲ್ಲಿ ಮಧ್ಯಾಹ್ನ 12-20 ರಿಂದ 12-50 ಸಮಯದಲ್ಲಿ ಅಮಾನತ್ತುಪಡಿಸಿಕೊಂಡು ಫೋಟೋ ತೆಗೆದಿರುತ್ತೇನೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ನಿಪಿ-23 ಎಂದು, ಸಾಕ್ಷಿ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋವನ್ನು ನಿಪಿ-24 ಎಂದು ಗುರುತಿಸಲಾಯಿತು.

ನಂತರ ಆರೋಪಿತರನ್ನು ಮತ್ತು ಅಮಾನತ್ತುಪಡಿಸಿಕೊಂಡ ಒಡೆವಗಳನ್ನು ಹೊನ್ನಾವರ ಠಾಣೆಗೆ ತಂದು ಒಡವೆಗಳನ್ನು ಠಾಣಾ ಪಿಎಫ್‌ನಲ್ಲಿ ನಮೂದಿಸಿ ಆರೋಪಿತರನ್ನು ರಿಮಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತೇನೆ.

ತನಿಖೆ ಇನ್ನೂ ಪೂರ್ಣಗೊಂಡಿಲ್ಲವಾದ್ದರಿಂದ ದಿನಾಂಕ 04-08-2020 ರಂದು ಪುನಃ ಆರೋಪಿತರನ್ನು ಪೋಲೀಸ್ ಕಸ್ಟಡಿಗೆ ಪಡೆದುಕೊಂಡಿರುತ್ತೇನೆ. ಆರೋಪಿತರು ಈ ಹಿಂದೆ ತಮ್ಮ ಸ್ವ ಖುಷಿ ಹೇಳಿಕೆಯಲ್ಲಿ ಹೇಳಿರುವಂತೆ ಕಳುವು ಮಾಲನ್ನು ತೋರಿಸುವುದಾಗಿ ಹೇಳಿದ್ದರಿಂದ ಠಾಣೆಗೆ 2 ಜನ ಪಂಚರನ್ನು ಬರಮಾಡಿಕೊಂಡು ಘಟನಾ ಸ್ಥಳವಾದ ಬಾದಳ್ಳಿಗೆ ಹೋಗಲಾಗಿ ಅಲ್ಲಿ ಆರೋಪಿತರು ಒಂದು

ಆರ್.ಸಿ.ಸಿ. ಮನೆಯನ್ನು ತೋರಿಸಿ ವಾಹನವನ್ನು ನಿಲ್ಲಿಸುವಂತೆ ಹೇಳಿ ಸದರಿ ಮನೆಯಲ್ಲಿ ತಾವು ಒಡವೆ ಕಳ್ಳತನ ಮಾಡಿರುವುದಾಗಿ ಹೇಳಿರುತ್ತಾರೆ. ನಂತರ ಅವರನ್ನು ಸದರಿ ಮನೆಗೆ ಕರೆದುಕೊಂಡು ಹೋಗಲಾಗಿ ಅವರು ಕಿಟಕಿಯ ಸಜ್ಜೆಯನ್ನು ತೋರಿಸಿ ಅದರ ಮೇಲೆ ಹತ್ತಿ ಮನೆಯ ಒಳಗೆ ಹೋಗಿ ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾರೆ. ನಂತರ ಆರೋಪಿತರು ಬೆಡರೂಮಿಗೆ ಕರೆದುಕೊಂಡು ಹೋಗಿ ಕಬ್ಬಿಣದ ಲಾಕರನ್ನು ತೋರಿಸಿ ಸದರಿ ಲಾಕರಿನಿಂದ 1 ನೇ ಆರೋಪಿ ಒಡವೆಗಳನ್ನು ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾನೆ. ನಂತರ ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ತಯಾರಿಸಿ ಫೋಟೋಗಳನ್ನು ತೆಗೆಸಿರುತ್ತೇನೆ. ಆ ಕಾಲಕ್ಕೆ ತೆಗೆದ 4 ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-25 ರಿಂದ 28 ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಮಧ್ಯಾಹ್ನ 02-15 ರಿಂದ 02-45 ರ ವರೆಗೆ ಬರೆದು ಮುಗಿಸಿರುತ್ತೇನೆ.

ನಂತರ ಪಂಚನಾಮೆಯನ್ನು ಮುಂದುವರೆಸುತ್ತಾ ಆರೋಪಿತರು ನಮ್ಮನ್ನು ಕಡತೋಕಾದ ಆಸ್ಪತ್ರೆಯ ಹತ್ತಿರ ಕರೆದುಕೊಂಡು ಹೋಗಿದ್ದು ಆಸ್ಪತ್ರೆಯಿಂದ ಸ್ವಲ್ಪ ಮುಂದೆ ಜಡ್ಡಿಗದ್ದೆ ಹತ್ತಿರ ಒಂದು ಮನೆಯನ್ನು ತೋರಿಸಿ ಸದರಿ ಮನೆಯಲ್ಲಿಯೂ ಸಹ ತಾವು ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಮನೆಯ ಬಾಗಿಲನ್ನು ತೋರಿಸಿ ಬಾಗಿಲಿನಿಂದ ಒಳಗೆ ಹೋಗಿ ಕೊಠಡಿಯ ಒಳಗೆ ಕಳ್ಳತನ ಮಾಡಿರುವುದಾಗಿ ತೋರಿಸಿರುತ್ತಾರೆ ಮತ್ತು ಮನೆಯ ಹಿಂದಿನ ಬಾಗಿಲನ್ನೂ ಸಹ ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಮುಂದುವರೆಸಿ ಮಧ್ಯಾಹ್ನ 03-00 ರಿಂದ 03-15 ರವರೆಗೆ ಸದರಿ ಮನೆಯ ಪಂಚನಾಮೆಯನ್ನು ಮುಗಿಸಿ ಒಂದು ಫೋಟೋ ತೆಗೆದಿರುತ್ತೇನೆ. ಸದರಿ ಫೋಟೋವನ್ನು ನೋಡುತ್ತಿದ್ದು ಅದನ್ನು ನಿಪಿ-29 ಎಂದು ಗುರುತಿಸಲಾಯಿತು.

ನಂತರ ಪಂಚನಾಮೆಯನ್ನು ಹಾಗೆಯೇ ಮುಂದುವರಿಸಿದ್ದು ಆರೋಪಿತರು ನಮ್ಮನ್ನು ಜಡ್ಡಿಗದ್ದೆ ಕ್ರಾಸ್‌ಗೆ ಕರೆದುಕೊಂಡು ಹೋಗಿ ಅಲ್ಲಿಂದ ಮುಂದೆ ಒಂದು ಮನೆಯನ್ನು ತೋರಿಸಿ ಸದರಿ ಮನೆಯಲ್ಲಿಯೂ ಸಹ ತಾವು ಕಳ್ಳತನ ಮಾಡಿರುವುದಾಗಿ ತೋರಿಸಿ ಅದರಂತೆ ಅವರನ್ನು ಸದರಿ ಮನೆಯ ಹತ್ತಿರ ಕರೆದುಕೊಂಡು ತೋರಿಸಲಾಗಿ ಅಲ್ಲಿ ಕಬ್ಬಿಣದ ಗ್ರಿಲ್ಸ ಬಾಗಿಲಿಗೆ ಬೀಗ ಹಾಕಿದ್ದು ಸದರಿ ಬೀಗ ಮುರಿದು ಮನೆಯ ಒಳಗೆ ಹೋಗಿ ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಮನೆಯ ಪಂಚನಾಮೆಯನ್ನು ಮಧ್ಯಾಹ್ನ 03-25 ರಿಂದ 03-40 ರವರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ತಯಾರಿಸಿರುತ್ತೇನೆ. ಮತ್ತು ಆ ಕಾಲಕ್ಕೆ 2 ಫೋಟೋ ತೆಗೆದಿರುತ್ತೇನೆ. ಸದರಿ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-30 ಮತ್ತು 31 ಎಂದು ಗುರುತಿಸಲಾಯಿತು.

ಪಂಚನಾಮೆಯನ್ನು ಮುಂದುವರೆಸಿ ಆರೋಪಿತರು ನಮ್ಮನ್ನು ಹೆಬ್ಬಾರ್ನಕೇರಿಗೆ ಕರೆದುಕೊಂಡು ಹೋಗಿದ್ದು ಅಲ್ಲಿಯೂ ಸಹ ಒಂದು ಕಳುವು ಮನೆಯನ್ನು ತೋರಿಸಿ ಸದರಿ ಮನೆಯಲ್ಲಿಯೂ ಸಹ ತಾವು ಕಳ್ಳತನ ಮಾಡಿರುವುದಾಗಿ ಹೇಳಿರುತ್ತಾರೆ. ಸದರಿ ಮನೆಯ ಹತ್ತಿರ ಮುಂದುವರಿದ ಪಂಚನಾಮೆಯನ್ನು 03-30 ರಿಂದ 04-25 ರ ವರೆಗೆ ಬರೆದು 2 ಫೋಟೋ ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-32 ಮತ್ತು 33 ಎಂದು ಗುರುತಿಸಲಾಯಿತು.

ಆರೋಪಿತರು ಸದರಿ ಮನೆಯ ಒಳಗೆ ಇದ್ದ ಅಲ್ಮೆರಾವನ್ನು ತೋರಿಸಿ ಅದರಿಂದ ಒಡವೆ ಕಳುವು ಮಾಡಿರುವುದಾಗಿ ಹೇಳಿರುತ್ತಾರೆ.

ಪಂಚನಾಮೆಯನ್ನು ಮುಂದುವರೆಸಿದ್ದು ಆರೋಪಿತರು ತಮ್ಮ ಸ್ವ ಖುಷಿ ಹೇಳಿಕೆಯಂತೆ ಕೆಕ್ಕಾರ ಕ್ರಾಸ್ ಹತ್ತಿರ ಒಂದು ಮನೆಯಲ್ಲಿ ಕಳುವು ಮಾಡಿರುವುದಾಗಿ ಹೇಳಿ ಅದರಂತೆ ನಮ್ಮನ್ನು ಸಂಜೆ 04-40 ರವೇಳೆಗೆ ಕೆಕ್ಕಾರದ ಒಂದು ಮನೆಯ ಹತ್ತಿರ ಕರೆದುಕೊಂಡು ಹೋಗಿರುತ್ತಾರೆ. ಆರೋಪಿತರು ಸದರಿ ಮನೆಯ ಮುಂಬಾಗಿಲನ್ನು ತೋರಿಸಿ ಕಬ್ಬಿಣದ ರಾಡಿನಿಂದ ಮನೆಯ ಒಳಗೆ ಹೋಗಿ ಬೆಡ್ ರೂಮಿನಲ್ಲಿ ಇಟ್ಟಿದ್ದ ಕಪಾಟಿನಲ್ಲಿ ಹಣ ಮತ್ತು ಒಡವೆಗಳನ್ನು ಕಳುವು ಮಾಡಿರುವುದಾಗಿ ತೋರಿಸಿರುತ್ತಾರೆ. ಸದರಿ ಮನೆಯ ಹತ್ತಿರ ಸಹ ಮುಂದುವರಿದ ಪಂಚನಾಮೆಯನ್ನು 04-25 ರಿಂದ 04-40 ರ ವರೆಗೆ ಬರೆದು ಫೋಟೋ ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-34 ಮತ್ತು 35 ಎಂದು ಗುರುತಿಸಲಾಯಿತು.

ಪಂಚನಾಮೆಯನ್ನು ಮುಂದುವರೆಸಿದ್ದು ಆರೋಪಿತರು ತಮ್ಮ ಸ್ವ ಖುಷಿ ಹೇಳಿಕೆಯಂತೆ ಹೊದಿಕೆ ಶಿರೂರಿನ ಹೂವಿನಹಿತ್ಲದಲ್ಲಿ ಒಂದು ಮನೆಯಲ್ಲಿ ಕಳುವು ಮಾಡಿರುವುದಾಗಿ ಹೇಳಿ ಅದರಂತೆ ನಮ್ಮನ್ನು ಹೊದಿಕೆ ಶಿರೂರಿನ ಹೂವಿನಹಿತ್ಲದ ಒಂದು ಮನೆಯ ಹತ್ತಿರ ಕರೆದುಕೊಂಡು ಹೋಗಿರುತ್ತಾರೆ. ಆರೋಪಿತರು ಸದರಿ ಮನೆಯನ್ನು ತೋರಿಸಿ ಮನೆಯ ಒಳಗೆ ಹೋಗಿ ಬೆಡ್ ರೂಮಿನಲ್ಲಿ ಇಟ್ಟಿದ್ದ ಕಪಾಟಿನಲ್ಲಿ ಹಣ ಮತ್ತು ಒಡವೆಗಳನ್ನು ಕಳುವು ಮಾಡಿರುವುದಾಗಿ ತೋರಿಸಿರುತ್ತಾರೆ. ಸದರಿ ಮನೆಯ ಹತ್ತಿರ ಸಹ ಮುಂದುವರಿದ ಪಂಚನಾಮೆಯನ್ನು 04-10 ರಿಂದ 04-25 ರ ವರೆಗೆ ಬರೆದು 2 ಫೋಟೋ ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-36 ಮತ್ತು 37 ಎಂದು ಗುರುತಿಸಲಾಯಿತು.

ಪಂಚನಾಮೆಯನ್ನು ಮುಂದುವರೆಸಿದ್ದು ಆರೋಪಿತರು ತಮ್ಮ ಸ್ವ ಖುಷಿ ಹೇಳಿಕೆಯಂತೆ ಚಂದಾವರದ ನೂರಾನಿ ಮೊಹಲ್ಲಾದ ಒಂದು ಮನೆಯಲ್ಲಿ ಕಳುವು ಮಾಡಿರುವುದಾಗಿ ಹೇಳಿ ಅದರಂತೆ ನಮ್ಮನ್ನು ಚಂದಾವರದ ನೂರಾನಿ ಮೊಹಲ್ಲಾದ ಒಂದು ಮನೆಯ ಹತ್ತಿರ ಕರೆದುಕೊಂಡು ಹೋಗಿರುತ್ತಾರೆ. ಆರೋಪಿತರು ಸದರಿ ಮನೆಯನ್ನು ತೋರಿಸಿ ಮನೆಗೆ ಹಾಕಿದ್ದ ಬೀಗವನ್ನು ಒಡೆದು ಮನೆಯ ಒಳಗೆ ಹೋಗಿ ಬೆಡ್ ರೂಮಿನಲ್ಲಿ ಇಟ್ಟಿದ್ದ ಕಪಾಟಿನಲ್ಲಿ ಹಣ ಮತ್ತು ಒಡವೆಗಳನ್ನು ಕಳುವು ಮಾಡಿರುವುದಾಗಿ ತೋರಿಸಿರುತ್ತಾರೆ. ಸದರಿ ಮನೆಯ ಹತ್ತಿರ ಸಹ ಮುಂದುವರಿದ ಪಂಚನಾಮೆಯನ್ನು 04-40 ರಿಂದ 04-50 ರ ವರೆಗೆ ಬರೆದು ಒಂದು ಫೋಟೋ ತೆಗೆಸಿರುತ್ತೇನೆ. ಸದರಿ ಫೋಟೋವನ್ನು ನೋಡುತ್ತಿದ್ದು ಅದನ್ನು ನಿಪಿ-38 ಎಂದು ಗುರುತಿಸಲಾಯಿತು.

ಪಂಚನಾಮೆಯನ್ನು ಮುಂದುವರೆಸಿದ್ದು ಆರೋಪಿತರು ತಮ್ಮ ಸ್ವ ಖುಷಿ ಹೇಳಿಕೆಯಂತೆ ಚಂದಾವರದ ಗಣಪತಿ ದೇವಸ್ಥಾನದ ಕೇರಿಯ ಒಂದು ಮನೆಯಲ್ಲಿ ಕಳುವು ಮಾಡಿರುವುದಾಗಿ ಹೇಳಿ ಅದರಂತೆ ನಮ್ಮನ್ನು ಚಂದಾವರದ ಗಣಪತಿ ದೇವಸ್ಥಾನದ ಕೇರಿಯ ಒಂದು ಮನೆಯ ಹತ್ತಿರ ಕರೆದುಕೊಂಡು ಹೋಗಿರುತ್ತಾರೆ. ಆರೋಪಿತರು ಸದರಿ ಮನೆಯನ್ನು ತೋರಿಸಿ ಮನೆಗೆ ಹಾಕಿದ್ದ

ಬೀಗವನ್ನು ಒಡೆದು ಮನೆಯ ಒಳಗೆ ಹೋಗಿ ಬೆಡ್ ರೂಮಿನಲ್ಲಿ ಇಟ್ಟಿದ್ದ ಕಪಾಟಿನಲ್ಲಿ ಹಣ ಮತ್ತು ಒಡವೆಗಳನ್ನು ಕಳುವು ಮಾಡಿರುವುದಾಗಿ ತೋರಿಸಿರುತ್ತಾರೆ. ಸದರಿ ಮನೆಯ ಹತ್ತಿರ ಸಹ ಮುಂದುವರಿದ ಪಂಚನಾಮೆಯನ್ನು 05-00 ರಿಂದ 05-10 ರ ವರೆಗೆ ಬರೆದು 2 ಫೋಟೋ ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-39 ಮತ್ತು 40 ಎಂದು ಗುರುತಿಸಲಾಯಿತು.

ಪಂಚನಾಮೆಯನ್ನು ಮುಂದುವರೆಸಿದ್ದು ಆರೋಪಿತರು ತಮ್ಮ ಸ್ವ ಖುಷಿ ಹೇಳಿಕೆಯಂತೆ ಚಂದಾವರದ ಗಣಪತಿ ದೇವಸ್ಥಾನದ ಕೇರಿಯ ಪರಮೇಶ್ವರಿ ದೇವಸ್ಥಾನದ ಕಾಣಿಕೆ ಡಬ್ಬಿಯಲ್ಲಿದ್ದ ಹಣವನ್ನು ಕಳುವು ಮಾಡಿರುವುದಾಗಿ ಹೇಳಿ ಅದರಂತೆ ನಮ್ಮನ್ನು ಚಂದಾವರದ ಗಣಪತಿ ದೇವಸ್ಥಾನದ ಕೇರಿಯ ಪರಮೇಶ್ವರಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಆರೋಪಿತರು ಸದರಿ ದೇವಸ್ಥಾನದಲ್ಲಿ ಹುಂಡಿ ಒಡೆದು ಹಣ ತೆಗೆದುಕೊಂಡ ಸ್ಥಳವನ್ನು ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಸಹ ಮುಂದುವರಿದ ಪಂಚನಾಮೆಯನ್ನು 05-20 ರಿಂದ 05-30 ರ ವರೆಗೆ ಬರೆದು ಒಂದು ಫೋಟೋ ತೆಗೆಸಿರುತ್ತೇನೆ. ಸದರಿ ಫೋಟೋವನ್ನು ನೋಡುತ್ತಿದ್ದು ಅದನ್ನು ನಿಪಿ-41 ಎಂದು ಗುರುತಿಸಲಾಯಿತು.

ಪಂಚನಾಮೆಯನ್ನು ಮುಂದುವರೆಸಿದ್ದು ಆರೋಪಿತರು ತಮ್ಮ ಸ್ವ ಖುಷಿ ಹೇಳಿಕೆಯಲ್ಲಿ ಹಳದೀಪುರ ಅಗ್ರಹಾರದ ಹೊಸದಾಗಿ ಕಟ್ಟುತ್ತಿರುವ ಒಂದು ಮನೆಯಲ್ಲಿ ಒಂದು ಪೆಟ್ಟಿಗೆಯಲ್ಲಿ ಇಟ್ಟಿದ್ದ ಹಣ ಮತ್ತು ಒಡವೆಗಳನ್ನು ಕಳುವು ಮಾಡಿರುವುದಾಗಿ ಹೇಳಿ ಅದರಂತೆ ನಮ್ಮನ್ನು ಹಳದೀಪುರ ಅಗ್ರಹಾರದ ಹೊಸದಾಗಿ ಕಟ್ಟುತ್ತಿರುವ ಒಂದು ಮನೆಯ ಹತ್ತಿರ ಕರೆದುಕೊಂಡು ಹೋಗಿರುತ್ತಾರೆ. ಆರೋಪಿತರು ತೋರಿಸಿದ ಆ ಸ್ಥಳದಲ್ಲಿ ಸಹ ಮುಂದುವರಿದ ಪಂಚನಾಮೆಯನ್ನು 05-55 ರಿಂದ 06-05 ರ ವರೆಗೆ ಬರೆದು ಒಂದು ಫೋಟೋ ತೆಗೆಸಿರುತ್ತೇನೆ. ಸದರಿ ಫೋಟೋವನ್ನು ನೋಡುತ್ತಿದ್ದು ಅದನ್ನು ನಿಪಿ-42 ಎಂದು ಗುರುತಿಸಲಾಯಿತು. ಹೀಗೆ ಹೊನ್ನಾವರ ಠಾಣೆಯಿಂದ ಪ್ರಾರಂಭಿಸಿದ ಪಂಚನಾಮೆಯನ್ನು ಸದರಿ ಸ್ಥಳದಲ್ಲಿ ಪಂಚರ ಸಮಕ್ಷಮದಲ್ಲಿ ಮುಕ್ತಾಯ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು **ನಿಪಿ-43 ಎಂದು**, ಸಾಕ್ಷಿ ಸಹಿಯನ್ನು ನಿಪಿ-43(ಎ) ಎಂದು ಗುರುತಿಸಲಾಯಿತು.

ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ತಾವು ಕಳುವು ಮಾಡಿದ ಒಡವೆಗಳ ಪೈಕಿ ಕೆಲವು ಒಡವೆಗಳನ್ನು ಅಕ್ಕಸಾಲಿಗರಾದ ಚಾಸಾ-13 ರಿಂದ 15 ರವರ ಬಳಿ ಅಡವು ಇಟ್ಟಿರುವುದಾಗಿ ಹೇಳಿರುತ್ತಾರೆ. ಅದರಂತೆ ಚಾಸಾ-13 ರಿಂದ 15 ರವರನ್ನು ಠಾಣೆಗೆ ಕರೆಸಿ ಆರೋಪಿತರನ್ನು ತೋರಿಸಿ ಆರೋಪಿತರು ಒಡವೆ ಅಡವು ಇಟ್ಟಿರುವ ಬಗ್ಗೆ ವಿಚಾರಿಸಿರುತ್ತೇನೆ. ಅವರು ಒಪ್ಪಿಕೊಂಡಿರುತ್ತಾರೆ ಮತ್ತು ಅದೇ ದಿನ 05-08-2020 ರಂದು ಆರೋಪಿತರು ಗಿರವಿ ಇಟ್ಟಿದ್ದ ಒಡವೆಗಳನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತಾರೆ. ಚಾಸಾ-13 ರವರು ಹಾಜರು ಪಡಿಸಿದ ಒಡವೆಗಳನ್ನು ಪಂಚನಾಮೆಯಡಿ ಬೆಳಿಗ್ಗೆ11-30 ರಿಂದ 12-30 ರ ಸಮಯದಲ್ಲಿ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಅಕ್ಕಸಾಲಿಗರ ಮೂಲಕ ತೂಕಮಾಡಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಅಮಾನತ್ತು ಪಂಚನಾಮೆಯನ್ನು ನೋಡುತ್ತಿದ್ದು

ನಿಪಿ-8 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-8(ಡಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಂದು ಫೋಟೋ ತೆಗೆದಿದ್ದು ಅದನ್ನು ಈಗ ನೋಡುತ್ತಿದ್ದು ನಿಪಿ-9 ಎಂದು ಗುರುತಿಸಲಾಗಿದೆ.

ಅದೇ ದಿನ 05-08-2020 ರಂದು ಆರೋಪಿತರು ಗಿರವಿ ಇಟ್ಟಿದ್ದ ಒಡವೆಗಳನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತಾರೆ. ಚಾಸಾ-14 ರವರು ಹಾಜರು ಪಡಿಸಿದ ಒಡವೆಗಳನ್ನು ಪಂಚನಾಮೆಯಡಿ ಮಧ್ಯಾಹ್ನ 01-00 ರಿಂದ 02-00 ರ ಸಮಯದಲ್ಲಿ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಅಕ್ಕಸಾಲಿಗರ ಮೂಲಕ ತೂಕಮಾಡಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಅಮಾನತ್ತು ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-10 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಂದು ಫೋಟೋ ತೆಗೆದಿದ್ದು ಅದನ್ನು ಈಗ ನೋಡುತ್ತಿದ್ದು ನಿಪಿ-11 ಎಂದು ಗುರುತಿಸಲಾಗಿದೆ.

ಅದೇ ದಿನ 05-08-2020 ರಂದು ಆರೋಪಿತರು ಗಿರವಿ ಇಟ್ಟಿದ್ದ ಒಡವೆಗಳನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತಾರೆ. ಚಾಸಾ-15 ರವರು ಹಾಜರು ಪಡಿಸಿದ ಒಡವೆಗಳನ್ನು ಪಂಚನಾಮೆಯಡಿ ಮಧ್ಯಾಹ್ನ 02-30 ರಿಂದ 03-15 ರ ಸಮಯದಲ್ಲಿ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಅಕ್ಕಸಾಲಿಗರ ಮೂಲಕ ತೂಕಮಾಡಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಅಮಾನತ್ತು ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-12 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಂದು ಫೋಟೋ ತೆಗೆದಿದ್ದು ಅದನ್ನು ಈಗ ನೋಡುತ್ತಿದ್ದು ನಿಪಿ-13 ಎಂದು ಗುರುತಿಸಲಾಗಿದೆ. ಅಮಾನತ್ತುಪಡಿಸಿಕೊಂಡ ಒಡವೆಗಳನ್ನು ಠಾಣಾ ಪಿಎಫ್‌ಗಳಲ್ಲಿ ನಮೂದಿಸಿರುತ್ತೇನೆ. ಅದೇ ದಿನ ಅಕ್ಕಸಾಲಿಗರಾದ ಚಾಸಾ-13 ರಿಂದ 15 ಮತ್ತು 19 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಚಾಸಾ-22 ರವರಿಂದ ಫೋಟೋ ತೆಗೆಸಿದ ಬಗ್ಗೆ ಕಲಂ 65-ಬಿ ಅಡಿ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ಸದರಿ ಪ್ರಮಾಣಪತ್ರವನ್ನು ನೋಡುತ್ತಿದ್ದು ನಿಪಿ-44 ಎಂದು, ಸಾಕ್ಷಿ ಸಹಿಯನ್ನು ನಿಪಿ-44(ಎ) ಎಂದು ಗುರುತಿಸಲಾಯಿತು. ಚಾಸಾ-1, 3 ಮತ್ತು 12 ರವರ ಮರುಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಚಾಸಾ-20, 21 ಮತ್ತು 23 ರವರ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ 06-08-2020 ರಂದು ಆರೋಪಿತರನ್ನು ರಿಮಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅಮಾನತ್ತುಪಡಿಸಿಕೊಂಡ ಒಡವೆಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಒಡವೆಗಳ 3 ಫೋಟೋಗಳನ್ನು ನೋಡಿ ಗುರುತಿಸಿದ್ದು ಸರಿ ಫೋಟೋಗಳನ್ನು ನಿಪಿ-45 ರಿಂದ 47 ಎಂದು ಗುರುತಿಸಲಾಯಿತು. ಉಳಿದ ಒಡವೆಗಳನ್ನೂ ಸಹ ನೋಡಿದರೆ ಗುರುತಿಸುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಗುರುತಿಸಿರುತ್ತಾರೆ. ಆರೋಪಿತರ ಮಾಹಿತಿಯಂತೆ ವಶಪಡಿಸಿಕೊಂಡಿರುವ 2 ಕಬ್ಬಿಣದ ರಾಡುಗಳನ್ನು ನೋಡುತ್ತಿದ್ದು ಅವುಗಳನ್ನು ಮುಮಾ-13 ಮತ್ತು 14 ಎಂದು ಗುರುತಿಸಲಾಯಿತು.

ತನಿಖೆ ಪೂರೈಸಿ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

ಚಾಸಾಃ 26, ಪ್ರಾಸಾಃ 09

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರು ಸಮಯಕೋರಿದ್ದರಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**